Reg No. M 1299 (Founded 1917) Daily & Weekly

ಸತ್ಯವಾದಿ
SATYAVADI

(ಆರಮನೆ ಸಿರಸ್ತೇದಾರ್ ಎಂ. ವಿ. ಸುಬ್ಬರಾಯರಿಂದ ಸ್ಥಾಪಿಸಲ್ಪಟ್ಟುದು)

ಸಂಪುಟ 28 ಸಂಚಿಕೆ 181] ಬುಧವಾರ 11—4—45 [3 ಪೈ

ಟೆಸ್ಟ್ ಟ್ಯೂಬ್ ಶಿಶುಗಳು

ಕ್ರೈಸ್ತಮುಖ್ಯಗುರುಗಳು ಅಸ್ವಭಾವಿಕ ಬೀಜಾವಾಪ ಮಾಡುವುದನ್ನು ಖಂಡನೆ ಮಾಡಿದರು.

ಪಾಪು ಗುರುವು ಈಗ ದಸಗಳ ಮೇಲೆ ಈ ತರಹ ಬೀಜಾವಾಪ ಪ್ರಯೋಗ ಮಾಡಿ, ಸ್ತ್ರೀ ಜಾತಿಯ ಮೇಲೆ ಈಗ ಈತರಹ ಶಿಕ್ಷಣ ಕೊಡುವ ಸಂಸ್ಥೆಗಳನ್ನು ಸ್ಥಾಪಿಸಿರುವುದು ಅಸಹ್ಯಕರವೆಂದು ಹೇಳಿದರು.

ವೆಸ್ಟ್‌ಮಿನಿಸ್ಟರಿನಲ್ಲಿ ಪ್ರಮುಖ ಗುರು ಡಾ ||ನಾರ್ಡ್ ಗ್ರಿಫಿನ್ನರು ರೋಮ್ ಕ್ಯಾಥೊಲಿಕ್ ವೈದ್ಯರಿಗೆ ಅಸ್ವಾಭಾವಿಕ ಬೀಜವಾಪ ಮಾಡಿಕೊಳ್ಳುವುದು ಅಸಹ್ಯದ ಕೆಲಸವೆಂದು ಹೇಳಿದರು.

ನಾನು ಹೇಳುವುದು ಗಂಡಹೆಂಡರ ಸ್ವಾಭಾವಿಕ ವಿಷಯವಲ್ಲದಲ್ಲಲ್ಲ. ನಾವು ಯೋಚಿಸಬೇಕಾದುದು ಒಬ್ಬ ಸ್ತ್ರೀಯು ತನ್ನ ಗಂಡನಲ್ಲದ ಮತ್ತೊಬ್ಬನೋ ಒಬ್ಬ ಅಪರಿಚಿತ ಬೀಜಾವಾಪದ ವಿಷಯವಾಗಿ. ಇಂಥಾ ಪದ್ಧತಿಯು ಮನುಷ್ಯನ ಗೌರವಕ್ಕೆ ಕುಂದಕವಾದುದು. ಮತ್ತು ಸ್ವಭಾವ ನಿಯಮಕ್ಕೆ ವಿರುದ್ಧವಾಡುದು. ಮತ್ತು ಜನಿಸುವ ಮಕ್ಕಳಿಗೆ ಅನ್ಯಾಯ ಮಾಡಿದಂಥಾದ್ದು. ಈ ತರಹ ಬೀಜಾವಾಪಕ್ಕೆ ಕಾರಣಭೂತನಾದ ತಾಯಿ ದನದ ಜಾತಿಗೆ ಸೇರ್ಪಡೆಗೆ ಇಳಿಸುವಳು.

ಹೆಂಡತಿಯು ಗರ್ಭೋತ್ಪತ್ತಿಗಾಗಿ ಈ ರೀತಿ ಗಂಡನಿಂದಲೇ ಹೊಂದಿದರೂ ಅದು ಪಾಪಕರವು. ಸ್ತ್ರೀಯು ತನ್ನ ಗಂಡನಲ್ಲದ ಇತರರ ಬೀಜವನ್ನು ಸ್ವೀಕರಿಸುವುದು ವ್ಯಭಿಚಾರಕ್ಕೆ ಸರಿಸಮಾನವು.

ಈ ತರಹ ಮಕ್ಕಳು ಮನೆಯಲ್ಲಿ ಜನನವಾಗುವುದು ಮತ್ತು ಇಂಥವುಗಳನ್ನು ತಂದೆಯು ಸಾಕುವುದೂ ಧರ್ಮಕ್ಕೂ ನೀತಿಶೀಲಕ್ಕೂ ತಕ್ಕುದಲ್ಲ. ಈ ತರಹ ಪದ್ಧತಿಯನ್ನು ಗಂಡನಾಗಲೀ ಹೆಂಡತಿಯಾಗಲೀ ಅನುಮೋದಿಸಿದರೂ, ಇ ಕಾರ್ಯದ ಅನೀತಿಯಿಂದ ಪಾರಾಗುವ ಹಾಗಿಲ್ಲ.

ವೈದ್ಯರು ಈ 'ಟೆಸ್ಟ್ ಟ್ಯೂಬ್' ಶಿಶುಗಳನ್ನು ಹುಟ್ಟಿಸುವುದನ್ನು ನಿರಾಕರಿಸಬೇಕು ಮತ್ತು ನೈಸರ್ಗಿಕ ಸಂತಾನ ವೃದ್ಧಿ ನಡೆಯುವುದರಲ್ಲಿ ಆಸಕ್ತರಾಗಬೇಕೆಂದರು,

ಈ ತರಹ ಸಂತಾನವೃದ್ಧಿಯನ್ನು 1897 ರಲ್ಲಿಯೂ ಕ್ರೈಸ್ತ ಚರ್ಚಿನವರು ನಿಷೇಧಿಸಿದ್ದರು. ಆದ್ದರಿಂದ ಈಗಲೂ ಕ್ಯಾಥೊಲಿಕ್ ಡಾಕ್ಟರುಗಳು ಈ ತರಹ ಸಂತಾನವೃದ್ಧಿಗೆ ಸಮ್ಮತಿಸಲಾಗದು, ಎಂದು ತಿಳಿಸಿ, ಈಗಿನ ಯುವಕ ವೈದ್ಯರಿಗೆ ಬುದ್ಧಿವಾದ ಹೇಳಿದರು.

ಉತ್ತರ ಜರ್ಮನಿ ಉರಿಯುತ್ತಿದೆ

ಪ್ಯಾರಿಸ್ ಏ 10—ಉತ್ತರ ಜರ್ಮನಿಯಲ್ಲಿ ಮುನ್ನುಗುತ್ತಿರುವ ಮಿತ್ರ ಸೈನ್ಯದ ಮುಂದೆ ಭಾರಿ ಬಿಗ್ಗಿ ಜ್ವಾಲೆಗಳು ಕಂಡಿತೆಂದು ಮಿತ್ರ ವಿಮಾನ ಪಡೆಯವರು ಹೇಳುತ್ತಾರೆ. ನಾಜೀಗಳೇ ಊರೂರುಗಳನ್ನು ಸುಡುತ್ತಿರಬಹುದೆಂದು ಒಂದು ಊಹಾಪೋಹ

ಇಂಗ್ಲೆಂಡಿನಲ್ಲಿ ವಶಪ್ಪೊಬ್ಬ ನಾಜಿ ಅಧಿಕಾರಿ ಹೆಂ ಹೆಸ್ ಇಂಗ್ಲೆಂಡಿಗೆ ಬಂದಂತೆ ನಾಲ್ಕು ವಾರಗಳ ಹಿಂದೆ ಕ್ಯಾಪ್ಟನ್ ಕ್ಲಾಸ್ ಬಂದಿರುವನು. ಈ ಸಂಧರ್ಭದಲ್ಲಿ ಪಾರ್ಲಿಮೆಂಟ್‌ನಲ್ಲಿ ಕೆಲ ಪ್ರಶ್ನೆಗಳು ಬಂದಿವೆ.

ಮಿತ್ರ ಸೇನೆಯವರು ಜರ್ಮನಿಯ ರೈನ್ ನದಿಗೆ ಪೆಸಲ್ ಬಳಿ ಪೈಲ್ವೈಸೇತುವೆಯನ್ನು ಕಟ್ಟುತ್ತಿರುವರು.

ನಾಜಿಗಳು ಹೊಸ ಆಯುಧವೊಂದನ್ನು ಕಂಡುಹಿಡಿದು ಅದರ ಪ್ರಯೋಗವನ್ನು ಪರೀಕ್ಷಿಸುತ್ತಿರುವರೆಂದು ಸ್ಟಾಕ್‌ಹಾಂ ವಾರ್ತೆ.

ಹೊಲೀವುಡ್ಡಿನ ಪ್ರಖ್ಯಾತ ನಟಿ 16 ವರ್ಷದ ಷರ್ಲಿ ಟೆಂಪಲ್ ಅವೇರಿಕಾ ವಿಮಾನ ಪಡೆಯ 24 ವರ್ಷದ ಮಿ || ದಗಾರ್ ಎಂಬುವನನ್ನು ಪರಿಸುವಳೆಂದು ಅಕೆಯ ತಂದೆತಾಯಿಗಳು ಪ್ರಕಟಿಸಿರುತ್ತಾರೆ.

ಚಿಕಾಗಾದಲ್ಲಿ ವಾಹನಗಳ ಮೇಲಿನ ಕಂದಾಯ ವಜಾ ಮಾಡಿದಾರೆ.

ಮಿ || ಜಿನ್ನಾರವರು 3 ತಿಂಗಳು ವಿಶ್ರಾಂತಿ ತೆಗೆದುಕೊಳ್ಳುವರು.

ಫ್ರಾನ್ಸ್ ತಬೇಲಿಗಳಲ್ಲಿದ್ದು ಜರ್ಮನಿಗೆ ಸಾಗಿಸಲ್ಪಟ್ಟಿದ್ದ ಅಗಾಪಾನರ ಕುದುರೆಗಳನ್ನು ಜನರಲ್ ಪಾರ್ಟರ್ ಸೈನ್ಯವು ಬಿಡುಗಡೆ ಮಾಡಿದೆ.

ಮಿಸೆಸ್ ಚರ್ಚಿಲ್ಲರು ಲೆನ್ಸ್‌ಗ್ರಾಡಿಗೆ ಬಂದಿರುವರೆಂದೂ ಮಾಸ್ಕೊ ರೇಡಿಯೋ ಸುದ್ದಿ.

ಲಂಡನ್ ರೇಡಿಯೋ ಕೈಗಾರಿಕೆಯ ಕೌನ್ಸಿಲ್ಲಿನ ಪ್ರಥಮ ಅಧ್ಯಕ್ಷರಾಗಿ ಚುನಾಯಿಸಲ್ಪಟ್ಟಿರುವ ಮಿ || ಅಲ್‌ಫ್ರೆಡ್ ಕ್ಲಾರ್ಕ್‌ರವರು ಕೈಮೇಲೆ ಧಂಸ ಬಹುದಾದ ರೇಡಿಯೋ ಸೆಟ್‌ಗಳು ಕ್ಷಿಪ್ರದಲ್ಲೇ ದೊರೆಯಬಹುದೆಂದು ಹೇಳಿರುತ್ತಾರೆ. ಇಂಗ್ಲೆಂಡಿನಲ್ಲಿ ಫೋನೋಗಾಫ್ ಪ್ರಚುರಪಡಿಸಿದವರೂ, ಗ್ರಾಮೊಫೋನ್ ಸೌಂಡ್ ಬಾಕ್ಸ್ ಕಂಡುಹಿಡಿದವರೂ ಇವರೇ. 20 ವಿಲಿಯರ್ಡ್ ಬಂಡವಾಳದ ರೇಡಿಯೋ ಇಂಡಸ್ಟ್ರೀಸ್ ಕೌನ್ಸಿಲ್ ಸ್ಥಾಪಿಸಲಾಯಿತು.

ಅಮೇರಿಕದಲ್ಲಿ ಮಾಂಸಕ್ಕೆ ಅಭಾವವಾದ್ದರಿಂದ ಜುಲೈನಿಂದ ಒಂದು ಪೌಂಡು ಮಾಂಸವನ್ನು ಇಂಗ್ಲೆಂಡಿಗೆ ಕಳುಹಿಸುವುದಿಲ್ಲವೆಂದು ತೀರ್ಮಾನಿಸಿರುವರು.

ವಿವಿಧ ವಿಷಯ

ಡೊ ಎಂಬ ಇಂಗ್ಲಿಷ್ ಭಾಷೆಯ ಶಬ್ದಕ್ಕೆ 32 ಬೇರೆ ಬೇರೆ ಅರ್ಥಗಳಿವೆ.

ಬ್ರಿಟನ್ನಿನ ಅತಿ ದೊಡ್ಡದಾದ ಕಿಟಕಿ ಯೊರ್ಕ್ ಮಿನಿಸ್ಟರಿನಲ್ಲಿರುವ ಈಸ್ಟ್ ವಿಂಡೋ. ಇದರ ಉದ್ದ 75 ಅಡಿಗಳು.

ಗಿಲಿಷರಲ್ಲಿ ಪ್ರಿನ್ಸಟ್ಟ(ಸ್ಕಾಟ್ಲೆಂಡ್) ಇದು ನಾಲ್ಕು ತಿಂಗಳ ಕಾಲ ಸಂ. ಅಮೆರಿಕದ ರಾಜಧಾನಿಯಾಗಿದ್ದಿತು.

ಯುದ್ಧಾರಂಭವಾದನಿಂದ ಈವರೆವಿಗೆ 892909 ಅಮೆರಿಕನ್ ಸೈನಿಕರು ಸತ್ತಿದ್ದುವರು.

ಫಿಲಿಪ್ಪೈನ್ಸಿನಲ್ಲಿ ಜಪಾನೀಯರ ಜನನಷ್ಟ 311000 ಎಂದು ಗೊತ್ತಾಗಿದೆ.

ರಾಜಕೀಯ ಖೈದಿಗಳನ್ನು ಮೊದಲು ಬಿಡಿ. ಅನಂತರ ಪ್ರಾಂತಗಳ ಅಧಿಕಾರ ಸ್ವೀಕಾರವನ್ನು ಯೋಚಿಸುವೆವು, ಎಂಬುದು ಗಾಂಧೀಜೀಯವರ ವಾದ.

ಲಂಡನ್ನಿನಲ್ಲಿ ಜರುಗುತ್ತಿರುವ ಸಾಮ್ರಾಜ್ಯ ಸಮ್ಮೇಳನದಲ್ಲಿ ಡಂಬರ್ಟನ್ ಓಕ್ಸ್ ಸಲಹೆಗಳನ್ನೆಲ್ಲಾ ಒಪ್ಪಿದರು.

ಮೊಂಟ್ಗಿ ಟ್ರಾಂವೆ ಮುಷ್ಕರ ನಿಂತಿತು. ಕೆಲಸಗಾರರ ಕೋರಿಕೆಗಳೆಲ್ಲ ನೆರವೇರಿದವು. ಆದರೆ ಇಪ್ಪತ್ತೈದು ಕೆಲಸಗಾರರು ವಜಾವಾದರು.

ಫಿನ್ಲೆಂಡಿನ ಮಂತ್ರಿ ಮಂಡಲ ರಾಜೀನಾಮೆ ಕೊಟ್ಟಿದೆ. ಕಾರಣ ತಿಳಿಸಿಲ್ಲ.

ಬರ್ಮಾ — ತಾಜಿ ನಗರವನ್ನು ಭಾರತೀ ಸೇನೆ ಹಿಡಿದಿದೆ.

ಜರ್ಮನಿ — ಮೂರು ತಿಂಗಳಿಂದ ಕಾರ್ಯಾಚರಣೆಯಲ್ಲಿದ್ದ ಕೋನಿಗ್ಸ್‌ಬರ್ಗವು ರಷ್ಯನರ ವಶವಾಯಿತು. ವಿಯನ್ನಾ ಮಧ್ಯಭಾಗಕ್ಕೆ ರಷ್ಯನರ ಸೇನೆ ನುಗ್ಗಿ. ಪಾರ್ಲಿಮೆಂಟಿನ ಕಟ್ಟಡ ಟವನ್ನು ಹಾಲು ಸೆಂಟ್ರಲ್ ಪೋಲಿಸ ಸ್ಟೇಷನ್ನು ಅಪೇರಹೌಸು ಇವನ್ನೆಲ್ಲ ಗೆದ್ದವು. ಹ್ಯಾಂಬರ್ಗ್ ಹ್ಯಾನೋವರ ಬ್ರನ್ಸ್ವಿಕ್ಕು ಲ್ಯೂಬೆಕ್ಕ ಇವೆಲ್ಲ ಉರಿಯುತ್ತಿದೆ ಅಮೆರಿಕಾದ ಸೈನ್ಯ ಎಸ್ಸೆನ ನಗರವನು ಹಿಡಿಯಿತು.

ಫೆಬ್ರವರಿಯಲ್ಲಿ ಮಾರ್ಚ್‌ಗಿಂತ ಕಡಿಮೆಯಾಗಿ ಯು-ಬೋಟುನಿಂದ ಮಿತ್ರ ಹಡಗುಗಳು ಮುಳುಗಿವೆ.

ಇನ್ನು ಮುಂದೆ ನಾಜಿಗಳು ಹಡಗುಗಳಿಂದ ವಿ-ಬಾಂಬನ್ನು ಪ್ರಯೋಗಿಸುವರಂತೆ.

ಹೊಸಪಟ್ಟಣದ ಸುದ್ದಿ

ಹೊಸಪೇಟೆಯಲ್ಲಿ ಡಿ-ಟೀ ಸ್ಪ್ರೇಯರಿಂದ ಮೊಟ್ಟೆ ಅಮೈರು ಪರೆಬಿಗಳ ನಿವೆ.ಣಾ ಲಕ್ಷದ ನಾಲ್ವತ್ತೈದು ಸಾವಿರ ಜನರಿಗೆ ಅಮೇರಿಕನರ ಕೈಲಸಿಕ್ಕ ವೈದ್ಯಗಳಾಗಿರ ತ್ಯಾರೆ

೦ ೦

ಅಮೇರಿಕಾದಲ್ಲಿರುವ ಆಕ್ಸಿಸ್ ವೈದ್ಯರುಗಳ ಒಟ್ಟು ಸಂಖ್ಯೆ ಮೂವತ್ತು ಲಕ್ಷದ ಇರವತ್ತೈದು ಸಾವಿರದ ಸಾನೂರ ಮೂವತ್ತೇಳು. ಅದರಲ್ಲಿ ಏನತ್ತು ಸಾವಿರದ ಏನೂರ ಏನತ್ತೆಂಟು ಜಪಾನಿ ವೈದ್ಯರುಗಳಿರುವರು.

೦ ೦

ಅಮೇರಿಕನರು ಒಂದು ಜರ್ಮನ್ ಸಾಮಾನುಗಳನ್ನು ಹಿಡಿದಾಗ ಒಂದು ದಿನದ ಮಟ್ಟಿಗೆ ಅಲ್ಲಿ ವೈದ್ಯರಾಗಿದ್ದ ಯುಗೋಸ್ಲೇವಿಯದವನನ್ನು ಗೌರ್ನರನ್ನಾಗಿ ಮಾಡಿದರು.

ಸಂಯುಕ್ತ ಸಂಸ್ಥಾನದ ಸ್ಟ್ರಾಟಜಿಕ್ ವಿಮಾನ ಬಲದ ನೂತನ ಕಮ್ಯಾಂಡರ್ ಮೇಜರ್ ಜನರಲ್ ವಿಲ್ಲಿಸ್ ಎಚ್. ಹೇಲ್ ರವರ ಚಿತ್ರ

ಶುದ್ಧವಾದುದೆಂದು ಗ್ಯಾರಂಟಿ. ಯಾವ ಅಪರಿಶುದ್ಧವಾದ ಪದಾರ್ಥ ಮಿಶ್ರವಾಗಿಲ್ಲ. ದೇವಸ್ಥಾನಗಳಲ್ಲೂ, ಪೂಜಾಕಾರ್ಯಕ್ಕೂ, ಔಷಧಗಳಿಗೂ, ಆಹಾರಗಳಿಗೂ, ಶುಭ ಸಂತೋಷ ಕಾರ್ಯಗಳಲ್ಲಿಯೂ ಉಪಯೋಗಿಸಲರ್ಹವಾಗಿದೆ.

.... ಶ್ರೀ ಓಂ ಬ್ರಾಂಡ್ ಕೇಸರಿ ....

ಕೇಸರಿಯನ್ನು ನಿರಾತಂಕಗಳ ಅನುಕೂಲಕ್ಕಾಗಿ 1 ತೊಲ, 5 ತೊಲ, 1 ಪೌಂಡ ಅಥವ ಹೆಚ್ಚಾಗಿ ಬಿಕರಿಗೆ ಇಡಲಾಗಿದೆ.

ಸಾವರ್ಕ ಬ್ರಾಂಡ್

ಓಂ ಬ್ರಾಂಡ್ ಕೇಸರಿಯ ಪುಡಿಯನ್ನು ಕಾಲು ತೊಲ, ಅರ್ಧ ತೊಲ, ಒಂದು ತೊಲ, ಐದು ತೊಲ ಮತ್ತು ಒಂದು ಪೌಂಡುಗಳಲ್ಲಿ ಬಿಕರಿಗೆ ಏರ್ಪಾಡಾಗಿದೆ

ಅಲ್ಲದೆ ಪುಡಿ ಮತ್ತು ಮಿಶ್ರ ಕೇಸರಿಯನ್ನು 16|1 ತೊಲ, 8|1 ತೊಲ, 4|1 ತೊಲ, ಅರ್ಧ ತೊಲ, ಒಂದು ತೊಲ ಐದು ತೊಲ ಮತ್ತು ಚಿಲ್ಲರೆಯಾಗಿಯೂ ಬಿಕರಿಗೆ ಇಟ್ಟಿದೆ. ಇವು ಹೊಟಲ್ ಉಪಯೋಗಕ್ಕೆ ಉಪಯುಕ್ತವಾದುದ್ದು. ಒಂದು ಸಲ ಉಪಯೋಗಿಸಿದರೆ ನಮ್ಮ ಕೇಸರಿಯ ಮಹತ್ವ ತಿಳಿಯುವುದು.

ಎಲ್ಲಾ ವರ್ತಕರು ಈ ಕೇಸರಿಯನ್ನು ಮೂರುವರು. ಮತ್ತು —

ವಲ್ಲಭದಾಸ್ ತೇಜ್ ಪಾಲ್ ಹಿಂಗು, ಕೇಸರಿ, ಸಚ್ಚಕರ್ಪೂರ ವರ್ತಕರು

14. ಗೋವಿಂದಪ್ಪ ನಾಯಿಕ' ಬೀದಿ ಜಿ.ಟಿ. ಮದರಾಸ'.

ಸತ್ಯವಾದಿ

ಸತ್ಯವಾದಿ ವಾರದಸಂಚಿಕೆ ಎಲ್ಲಾ ಊರುಗಳಲ್ಲೂ ವಿಜಂಟರುಗಳು ಬೇಕಾಗಿದಾರೆ. ಹೆಚ್ಚಿನ ವಿಷಯಗಳಿಗೆ ಬರೆಯಿರಿ.

ಮ್ಯಾನೇಜರ', ಸತ್ಯವಾದಿ
ಚಾಮರಾಜಪುರಂ ಮೈಸೂರು

ಅಂದವಾದ ಹೊಲಿಗೆಗೆ

— ನಮ್ಮಲ್ಲಿ ಬನ್ನಿ —

ಶ್ರೀ ಮಹಾಲಕ್ಷ್ಮಿ ಹಾಲ್'

ಸಯ್ಯಾಜಿರಾವ್ ರಸ್ತೆ' ಮೈಸೂರು

At Ranjit

Pagli Duniya

ರಣಜಿತ್ ಟಾಕೀಸಿನಲ್ಲಿ
4 ನೇ ಅಮೋಘ ವಾರ

ಪಗಲಿ ದುನಿಯಾ
(ಹಿಂದಿ)

ನುಮ್ಮಾಜ್ ಶಾಂತಿ ಮೋತಿಲಾಲ್
ಜೇಕ್‌ಮುಕ್ತಾರ್ ಪಾತ್ರವಹಿಸಿರುವರು

Edited, Printed and published by M. S. Krishna Rao, at the Satvavadi Press, Chamaraja Agrahar, Mysore

For Good Printing—

L. N. Press

Srirampet MYSORE

ರಕ್ತ ವೃದ್ಧಿಗೆ — ಧಾತುಪುಷ್ಟಿಗೆ

ಶಕ್ತಿಸುಧಾ

ಸೇವನೆಯೇ ಸುಲಭೋಪಾಯ

ಶಕ್ತಿಸುಧಾ, ೧೦೬೭ ಚಾಮರಾಜಪುರಂ ಮೈಸೂರು.

AT OPERA — From 7-4-45

Air Raid Wardens

With Stan Laurel & Oliver Hardy

12-4-45 ರಿಂದ

'ಪೂಂಪಾವೆ'

ಪಾಶ್ವ - ರಾಜಕ್ಷ್ಮಿ, ಗಣೇಶ್, ವಿಷ್ಣು, ಕೃಷ್ಣ



ಐ.ಜೆ. ಹಾಲ್, ಸರಾಫ್ ಅಂಗಡಿ ರಸ್ತೆ ಬೀದಿ, ಮೈಸೂರು.